ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಬೆಳ್ತಂಗಡಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಮಾಡಲು ಪಡೆದುಕೊಂಡ ನಿವೇಶನದಲ್ಲಿ 400 ಕಿ.ಮೀ. ಟ್ರಾಕ್ ನಿರ್ಮಿಸಲು ಸಾಕಷ್ಟು ಸ್ಥಳಾವಕಾಶವಿಲ್ಲವಾದ್ದರಿಂದ ಕಾಮಗಾರಿ ಸ್ಥಗಿತಗೊಂಡಿದೆ. ಈ ಜಮೀನಿಗೆ ಹೊಂದಿಕೊಂಡಂತೆ ಹೆಚ್ಚುವರಿ ಜಮೀನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹೆಚ್ಚುವರಿ ಜಮೀನು ದೊರೆತ ಕೂಡಲೆ ಕೇಂದ್ರ ಸರ್ಕಾರದ ಅನುದಾನ. ಶಾಸಕರ ಹಾಗೂ ಲೋಕಸಭಾ ಸದಸ್ಯರ ನಿಧಿಯಿಂದ ಅನುದಾನ ಪಡೆದು ಕ್ರೀಡಾಂಗಣವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಬೆಳ್ತಂಗಡಿಯಲ್ಲಿ ಕ್ರೀಡಾ ವಸತಿ ನಿಲಯ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆ ಪ್ರದೇಶದ ಸಮಸ್ಯೆಗಳು

1987(2367) - ಶ್ರೀ ಪಿ.ಹೆಚ್. ಪೂಜಾರ, (ಬಾಗಲಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಲಮಟ್ಟಿ ಜಲಾಶಯದಲ್ಲಿ ಭಾದಿತ ಪ್ರದೇಶವೆಂದು ಘೋಷಣೆ ಮಾಡಲಾಗಿರುವ 521 ರಿಂದ 523 ಎಫ್.ಆರ್.ಎಲ್ ವರೆಗಿನ ಮತ್ತು ನೀರು ನಿಂತ ಸ್ಥಳದಿಂದ 100 ಮೀ. ದೂರದವರೆಗಿನ ಜನವಸತಿ ಪ್ರದೇಶಗಳ ಜನತೆ ರೋಗ ರುಜಿನ, ಹುಳು ಉಪ್ಪಡಿಗಳಿಂದ ಕೂಡಿದ ಅತ್ಯಂತ ಅನಾರೋಗ್ಯಕರ ಪರಿಸರದಲ್ಲಿ ಜೀವನ ನಡೆಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರತಿ ವರ್ಷವೂ ಮಹಾಪೂರ ಬರುವ ತಿಂಗಳುಗಳಲ್ಲಿ ಇಂತಹ ಸ್ಥಿತಿ ಉದ್ಭವವಾಗಲಿರುವುದು ನಿಜವೇ;

ಇ) ಹಾಗಿದ್ದಲ್ಲಿ ಪ್ರಕಟಿಸಿದಂತೆ ಮುಂದಿನ ವರ್ಷದ ನೀರು ಹಿಡಿದಿರುವ ಅವಧಿಯೊಳಗಾಗಿ ಈ ಪ್ರದೇಶಗಳ ಜನತೆಗೆ ಅವರ ಮನೆಗಳಿಗೆ ಪರಿಹಾರ ಧನ ನೀಡಿ, ಪುನರ್ವಸತಿಗೊಳಿಸಲಾಗುವುದೇ;

ಈ) ಹಾಗಿಲ್ಲದಿದ್ದಲ್ಲಿ ಸಮಯದ ಗಡುವನ್ನೇನಾದರೂ ಸರ್ಕಾರ ಹಾಕಿಕೊಂಡಿದೆಯೇ; ಗಡುವಿನ ವಿವರ ನೀಡುವುದು;

ಉ) ಈ ಕುರಿತಂತೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮದ ಸಂಪೂರ್ಣ ವಿವರ ನೀಡುವುದು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು

ಆ) ಇಲ್ಲ

ಇ) ಈ ಬಗ್ಗೆ ಸರ್ವೆ ಕೆಲಸವು ಭರದಿಂದ ಸಾಗಿದೆ. ಆದರೆ ಮುಂದಿನ ವರ್ಷದ ನೀರು ಹಿಡಿಯುವ ಅವಧಿಯೊಳಗೆ ಪರಿಹಾರ ನೀಡುವಿಕೆ ಮತ್ತು ಪುನರ್ವಸತಿಯನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ.

ಈ) ಪರಿಹಾರ ಹಣ ನೀಡಲು 2 ವರ್ಷದ ಅವಧಿ ಮತ್ತು ಪುನರ್ವಸತಿ ಕಲ್ಪಿಸಲು 3 ವರ್ಷ ಅವಧಿ ಬೇಕಾಗುವುದರಿಂದ ಅದರಂತೆ ಕಾರ್ಯ ಕ್ರಮವನ್ನು ರೂಪಿಸಲಾಗಿದೆ.

ಉ) ಈಗಾಗಲೇ ಸರ್ಕಾರದ ಆದೇಶ ದಿನಾಂಕ 16-11-02ರಲ್ಲಿ ವಿಶೇಷ ಪ್ಯಾಕೆಜ್‌ನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ಬಾಹ್ಯರೇಖೆ 521 ಮೀ. ನಿಂದ 523 ಮೀ. ದೂರದವರೆಗಿನ ಪ್ರದೇಶವನ್ನು ಭಾದಿತ ಪ್ರದೇಶವೆಂದು ಘೋಷಿಸಿದ್ದು ಈ ಪ್ರದೇಶದಲ್ಲಿ ಬರುವ ಆಸ್ತಿಗಳ ಸ್ವಾಧೀನತೆ ಕೈಗೊಂಡು ನವನಗರದಲ್ಲಿ ನಿವೇಶನ ನೀಡಿ ಪುನರ್ವಸತಿ ಕೈಗೊಳ್ಳಲಾಗುವುದು.

ಕಮಲಾಪುರ ಕ್ಷೇತ್ರದ ಕಡಗಂಚಿ ಬಸವಕಲ್ಯಾಣ ರಸ್ತೆ ಡಾಂಬರೀಕರಣ

1988(2471) - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನಸಭಾ ಕ್ಷೇತ್ರದ ಕಡಗಂಚಿ ಬಸವಕಲ್ಯಾಣ ರಸ್ತೆ ಡಾಬಂರೀಕರಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಡಾಬಂರೀಕರಣವಾಗದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಯಾವಾಗ ಡಾಂಬರೀಕರಣ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಡಾಂಬರೀಕರಣವಾಗದ 1 ಕಿಮೀ ರಾಜ್ಯ ಹೆದ್ದಾರಿಯನ್ನು (ಹುಲಸೂರು, ಬಸವಕಲ್ಯಾಣ ಮುಡಬಿ, ಮಹಾಗಾಂವ ರಾಜ್ಯ ಹೆದ್ದಾರಿಯ ಕಿಮೀ 58.00 ದಿಂದ 59.00 ವರೆಗಿನ ಒಂದು ಕಿಮಿ) ಅನುದಾನದ ಲಭ್ಯತೆ ಮೇರೆಗೆ ಈ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ಕಮಲಾಪುರ ಕ್ಷೇತ್ರದ ಉಮರ್ಗಾಬಾರ್ಡರ್‌ನಿಂದ ಆಳಂದ-ಸೇಲೇಪೇಟೆ ರಸ್ತೆ ಡಾಂಬರೀಕರಣ

1989(2472) - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನಸಭಾ ಕ್ಷೇತ್ರದ ಉಮರ್ಗ ಬಾರ್ಡರ್‌ನಿಂದ ಆಳಂದ-ಸುಲೇಪೇಟೆ ರಸ್ತೆಯಲ್ಲಿ (ರಾಜ್ಯ ಹೆದ್ದಾರಿ) ಡಾಂಬರೀಕರಣಕ್ಕೆ ಮಂಜೂರಾತಿ ನೀಡಿದ್ದು ಯಾವಾಗ;

ಆ) ಡಾಮರೀಕರಣ ಗುತ್ತಿಗೆ ಪಡೆದದ್ದು ಯಾರು; ಡಾಂಬರೀಕರಣಕ್ಕೆ ಮಂಜೂರಾದ ಹಣ ಎಷ್ಟು;

ಇ) ಸದರಿ ರಸ್ತೆಯ ಮಧ್ಯೆ ಒಂದು ಕಿಲೋ ಮೀಟರ್ ಡಾಂಬರೀಕರಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಡಾಂಬರೀಕರಣವಾಗದೇ ಇರಲು ಕಾರಣವೇನು;

ಈ) ಯಾವಾಗ ಡಾಂಬರೀಕರಣ ಮಾಡಲಾಗುವುದು?